ಶ್ರೀ ಪಿ. ಎಫ್. ರೋಡ್ರಿಗ್ಸ್.—ಮೂರನೇ ಮಹಡಿಗೆ ನೀರು ಹತ್ತುದಿವುಲ್ಲ ಎಂಬ ದೂರು ಇದು ವರಿಗೂ ಸರ್ಕಾರಕ್ಕಾಗಲೀ ಅಥವಾ ಹೌಸಿಂಗ್ ಬೋರ್ಡಿಗಾಗಲೀ ಬಂದಿಲ್ಲ. Dafinitely, I will look into it.

ಶ್ರೀ ಎಂ. ಚಂದ್ರಶೇಖರಿರ್.—ಪ್ರಶ್ನೆ ಕೇಳಿರುವುದು ರಸ್ತೆ, ಬೀದಿ ದೀಪ ಹಾಗೂ ನೀರಿನ ಸೌಲಭ್ಯ ಒದಗಿಸಲಾಗಿದೆಯೇ ಎಂಬುದಾಗಿ ಕೇಳಿದ್ದರೆ, ಮಾನ್ಯ ಮಂತ್ರಿಗಳು ಮನೆಗಳ ದೀಪ, ಮನೆಗಳಿಗೆ ನೀರಿನ ಸೌಲಭ್ಯವನ್ನು ೧೪೧೧ ಮನೆಗಳಿಗೆ ಒದಗಿಸಿರುವ ಬಗ್ಗೆ ಹೇಳುತ್ತಿದ್ದಾರೆ ಹೊರಗಡೆ ಸಿವಿಲ್ ಕಾಮಗಾರಿ ಗಳು ಆಗಬೇಕಾಗಿರುವುದರಿಂದ ಒಳಗಡೆ ಪ್ರವೇಶ ಮಾಡುವುದಕ್ಕೆ ಕಷ್ಟವಾಗಿದೆ. ಸಾಮಾನ್ಯವಾಗಿ ರಾತ್ರಿಯ ಸಮಯದಲ್ಲಿ ಹೊರಗಡೆ ಹೋಗತಕ್ಕಂಥವರಿಗೆ ಬಹಳ ತೊಂದರೆಯಾಗಿದೆ. ೧೪೧೧ ಮನೆ ಗಳನ್ನು ಕಟ್ಟಿ ಪೂರ್ಣ ೪ ವರ್ಷವಾ ದ. ಆದನ್ನು ಈಗಿರುವ ಪರಿಸ್ಥಿತಿಯಲ್ಲಿಯೇ ಕಾರ್ಪೊರೇಷನ್ನಿಗೆ ವಹಿಸಿಕೊಡಿ. ನಂತರ ೬೦ ಮನೆಗಳ ಕೆಲಸವೊ ಕಂಪ್ಲೀಟ್ ಆದ ಮೇಲೆ ಕಾರ್ಪೊರೇಷನ್ನಿಗೆ ಆಮೇಲೆ ವಹಿಸಿ ಕೊಟ್ಟರಾಯಿತಂ. ಈಗ ಇರುವ ಸ್ಥಿತಿಯಲ್ಲಿಯೇ ಕಾರ್ಪೊರೇಷನ್ನಿಗೆ ಏಕೆ ವಹಿಸಿಕೊಡಬಾರದು ?

ಅಧ್ಯಕ್ಷರು.—ಮಾನ್ಯ ಶಾಮಣ್ಣನವರು ಆದನ್ನು ಈಗಾಗಲೇ ಕೇಳಿದ್ದಾರೆ. ಮತ್ತೇ ಹೇಳಿದ್ದನ್ನು ಹೇಳುವುದು ಬೇಡ.

ಶ್ರೀ ಎಂ. ಚಂದ್ರಶೆಖರಿರ್.—ಓವರ್ ಹೆಡ್ ಟ್ಯಾಂಕ್ ಇಲ್ಲದೆ ಮೂರನೆ ಮಹಡಿಯಲ್ಲಿರುವ ಜನ ರಿಗೆ ನೀರಿನ ಸೌಕರ್ಯವನ್ನು ಕಲ್ಪಿಸುವುದಕ್ಕೆ ಹೇಗೆ ಸಾಧ್ಯ ? ಹಾಗೂ ಓವರ್ ಹೆಡ್ ಟ್ಯಾಂಕ್ ಇಲ್ಲದೆ ಇರತಕ್ಕಂಥ ಸ್ಕೀಂನ್ನು ವಾಟರ್ ಬೋರ್ಡಿನವರು ಯಾವ ರೀತಿ ಅಪ್ರೂವ್ ಮಾಡಿದರು ?

ಶ್ರೀ ಪಿ. ಎಫ್. ರೋಡ್ರಿಗ್ಸ್.—ಮೂರನೇ ಮಹಡಿಗೆ ನೀರು ಹತ್ತುವುದಿಲ್ಲ ಎಂಬ ದೂರು ಸರ್ಕಾರಕ್ಕಾಗಲೀ, ಅಥವಾ ಹೌಸಿಂಗ್ ಬೋರ್ಡಿಗಾಗಲೀ ಇದುವರೆಗೂ ಬಂದಿಲ್ಲ, ಆ ರೀತಿಯ ಪರಿಸ್ಥಿತಿ ಯಿದ್ದರೆ ನಿಜಕ್ಕೂ ಅದನ್ನು ಪರಿಶೀಲನೆ ಮಾಡಿ I will difinitely look into it.

ಶ್ರೀ ಎಂ. ಚಂದ್ರಶೇಖರಿರ್.—ಮೊದಲನೆ ಮಹಡಿಗೂ ನೀರು ಹೋಗುವುದಿಲ್ಲ ಎಂಬ ದೂರು ಇದೆ. ಅದಕ್ಕೋಸ್ಕರವಾಗಿ ನೀರನ್ನು ಪಂಪ್ ಮಾಡಬೇಕಾಗುತ್ತದೆ. ಕಾವೇರಿ ಸ್ಕೀ ಪ್ರಾರಂಭವಾದ ಮೇಲೆ ಒಂದು ಮತ್ತು ಎರಡನೆ ಮಹಡಿಗೂ ನೀರು ಬರುವುದಿಲ್ಲ. ಆಂದಮೇಲೆ ಮೂರನೆ ಮಹಡಿಗೆ ನೀರು ಬರುವುದಕ್ಕೆ ಸಾಧ್ಯವೇ ಇಲ್ಲ.

ಶ್ರೀ ಪಿ. ಎಫ್. ರೋಡ್ರಿಗ್ಸ್.—ಈಗಾಗಲೆ ಇದನ್ನು ಪರಿಶೀಲನೆ ಮಾಡುತ್ತೇನೆ ಎಂಬುದಾಗಿ ಹೇಳಿ ದ್ದೇನೆ. I will examine.I will definitely look into it.I will see whether overhead tank is necessary.

Government Order regarding Revenue and Gomal Lands in Tunga and Bhadra Ayacut area

18. SRI K. YENKATAPPA (Shikaripur).—Will the Minister for Revenue be pleased to state :—

a) whether there is any Government order for not distributing Revenue and Gomal Lands in Thunga and Bhadra Ayacut ;

(*b*) if so, which are the Taluks coming under the purview of this order in Shimoga District ;

(*c*) whether Government proposes to distribute land to landless, Backward classes Minorities and Harijans/Girijans by liberalising the present Government Order ?

SRI B. BASAVALINGAPPA (Minister for Revenue).—

(*a*) Yes.

(*b*) Except in some parts of Sagar and Hosanagar Taluk in Shimoga District. all other areas come under the purview of this Government Order.

(*c*) No.

ಶ್ರೀ ಕೆ. ಯಂಕಟಪ್ಪ.—ನನ್ನ ಮೊದಲನೇ ಪ್ರಶ್ನೆಗೆ ತಾವು ಒಪ್ಪಿಗೆ ಕೊಟ್ಟಿದ್ದೀರಿ. ಎರಡನೇ ಪ್ರಶ್ನೆಯಲ್ಲಿ ಸಾಗರ ಮತ್ತು ಹೊಸನಗರ ತಾಲ್ಲೂಕಿನ ಕೆಲವು ಭಾಗಗಳನ್ನು ಬಿಟ್ಟು ಶಿವಮೊಗ್ಗ ಜಿಲ್ಲೆಯ ಉಳಿದೆಲ್ಲ ಪ್ರದೇಶಗಳೂ ಈ ಆಜ್ಞೆಯ ವ್ಯಾಪ್ತಿಯೊಳಗೆ ಬರುತ್ತವೆ ಎಂಬುದಾಗಿ ಹೇಳಿದ್ದೀರಿ, ಹಾಗಿದ್ದರೆ ಆ ಪ್ರದೇಶದಲ್ಲಿ ಜಮೀನನು ಹಂಚತಕ್ಕಂಥ ವ್ಯವಸ್ಥೆ ಹೇಗೆ ? ಈಗ ಇರತಕ್ಕಂಥ ಕಾನೂನನ್ನು ಯಾವಾಗ ವಾಪಸ್ಸು ತೆಗೆದುಕೊಳ್ಳುತ್ತೀರಾ? ಎಷ್ಟು ದಿವಸಗಳಲ್ಲಿ ವಾಪಸ್ಸು ತೆಗೆದುಕೊಳ್ಳುತೀರಾ ಎನ್ನ ತಕ್ಕಂಥದ್ದನ್ನು ಹೇಳುವುದಕ್ಕಾಗುತ್ತಯೇ ?

† ಶ್ರೀ ಬಿ. ಬಸವಲಿಂಗಪ್ಪ.—೧೯೭೨ರ ಸರ್ಕಾರದ ಆದೇಶದ ಮೇಲೆ ಈ ಪ್ರದೇಶದಲ್ಲಿರತಕ್ಕಂಥ ಜಮೀನನ್ನು ಮಂಜೂರು ಮಾಡಬಾರದು ಏಂಬುದಾಗಿ ನಿರ್ಣಯ ಕೈಗೊಂಡಿದ್ದೇವೆ. ಇದಕ್ಕೆ ಕಾರಣ ಮೇಲ್ಕಂಡ ಪ್ರದೇಶದಲ್ಲಿರುವ ಜಮೀನನ್ನು ರೈತರಿಗೆ ಮಂಜೂರು ಮಾಡಿದರೆ ತುಂಗಭದ್ರಾ ಅಣೆಕಟ್ಟಿಗೆ ಮಣ್ಣು ಹೋಗಿಬಿಟ್ಟು ಅಣೆಕಟ್ಟು ಮಣ್ಣಿನಿಂದ ತುಂಬಿ ಬಿಡಬಹುದು ಊಹಿಸಿ ಈ ನಿರ್ಣಯ ತೆಗೆದುಕೊಂಡಿದ್ದೇವೆ. ಈ ನಿರ್ಣಯ ಈ ಪ್ರದೇಶದಲ್ಲಿ ಜಾರಿಯಲ್ಲಿದೆ. ಬಡವರಿಗೆ ಜಮೀನು ಕೊಡಬೇಕೆಂದು ಶ್ರೀಮಾನ್ ಯಂಕಟಪ್ಪನವರು ನನಗೆ ಒಂದು ಕಾಗದ ಬರೆದಿದ್ದರು. ಆ ರೀತಿ ಅವರು ಕಾಗದ ಬರೆದ ಮೇಲೆ ಹಾಗೂ ಬಡವರಿಗೆ ಆ ಜಮೀನನ್ನು ಕೊಡಬಹುದೆಂದು ಅಲ್ಲಿಯ ಜನಗಳು ಆಗಾಗ್ಗೆ ಅಹವಾಲ್ ಮಾಡುತ್ತಿದ್ದರು. ಈ ಬೇಡಿಕೆಯನ್ನು ಯಾವ ರೀತಿ ಪರಿಶೀಲನೆ ಮಾಡಬಹುದು ಎನ್ನುವುದರ ಬಗ್ಗೆ ನಿರ್ಣಯ ತೆಗೆದುಕೊಂಡಿದ್ದೇವೆ. ಅದಕ್ಕೆ ಒಂದು ಸಮಿತಿಯನ್ನು ಮಾಡಿದ್ದೇವೆ. ಆ ಸಮಿತಿಯವರು ವರದಿಯನ್ನು ಒಪ್ಪಿಸಿದ ಮೇಲೆ ಆ ಪ್ರದೇಶದಲ್ಲಿ ಎಷ್ಟೆಷ್ಟು ಜಮೀನನ್ನು ಮಂಜೂರು ಮಾಡಬಹುದು ಎನ್ನುವುದರ ಬಗ್ಗೆ ಸರ್ಕಾರ ನಿರ್ಣಯವನ್ನು ಆದಷ್ಟು ಶೀಘ್ರವಾಗಿ ತೆಗೆದುಕೊಳ್ಳತಕ್ಕಂಥ ಸಂದರ್ಭ ಇರುವುದರಿಂದ, ಇಷ್ಟು ಹೇಳಿದ ಮೇಲೆ ಮಾನ್ಯ ಶ್ರೀ ಯಂಕಟಪ್ಪನವರಿಗೆ ತೃಪ್ತಿಯಾಗಿರಬಹುದೆಂದು ನಾನು ತಿಳಿದುಕೊಂಡಿದ್ದೇನೆ.

ಶ್ರೀ ಕೆ. ಯಂಕಟಪ್ಪ.—೧೯೭೨ರಲ್ಲಿ ಆದಂಥಹ ಕಾನೂನು ಈಗ ಜಾರಿಯಲ್ಲಿದೆ. ಈ ಕಾನೂನು ಜಾರಿಗೆ ಬಂದ ಮೇಲೆ ಎಷ್ಟೋ ಜನರಿಗೆ ಕೆಳಗಿನ ಅಧಿಕಾರಿಗಳು ಸಾಗುವಳಿ ಚೀಟಿಯನ್ನು ಕೊಟ್ಟಿದ್ದಾರೆ. ಅಂತಹ ಒಂದು ಪ್ರಸಂಗ ಇರುವಾಗ ಸಮಿತಿಯ ವರಿಂದ ವರದಿ ಬಂದಮೇಲೆ ಮಾಡುತ್ತೇವೆಂದು ಹೇಳುವುದು ಸೂಕ್ತ ಅಲ್ಲ. ಆ ಸಮಿತಿಯವರು ಬಹಳ ವರ್ಷಗಳಿಂದ ಇದ್ದಾರೆ. ಇದರ ಬಗ್ಗೆ ಸರ್ಕಾರದವರು ಆದಷ್ಟು ಬೇಗ ನಿರ್ಣಯ ತೆಗೆದುಕೊಳ್ಳಬೇಕು.

ಶ್ರೀ ಬಿ. ಬಸವಲಿಂಗಪ್ಪ.—ನಾನು ಹೇಳಿದ್ದನ್ನು ಮಾನ್ಯ ಶ್ರೀ ಯಂಕಟಪ್ಪನವರು ತಿಳಿದುಕೊಳ್ಳಲಿಲ್ಲ ಎಂದು ಕಾಣುತ್ತದೆ. ಸಮಿತಿಯನ್ನು ಮಾಡಿದ್ದೇವೆ. ಆದಾದ ೧೦-೧೫ ದಿವಸಗಳು ಕಳೆದ ಮೇಲೆ ಶ್ರೀಮಾನ್ ಯಂಕಟಪ್ಪನವರು ಪತ್ರ ಬರೆದರು. ಆ ಪತ್ರದ ಮೇಲೆ ಸಭೆಯನ್ನು ಕರೆದು ನಿರ್ಣಯ ತೆಗೆದುಕೊಂಡಿದ್ದೇವೆ, ಆದಷ್ಟು ಶೀಘ್ರವಾಗಿ ವರದಿ ಬರಬಹುದೆಂದು ನಿರೀಕ್ಷಣೆ ಮಾಡಿದ್ದೇನೆ. ವರದಿ ಬಂದ ತಕ್ಷಣ ಕ್ರಮ ತೆಗೆದುಕೊಳ್ಳುತ್ತೇನೆ, ಬಡವರಿಗೆ ಜಮೀನು ಕೊಡಬೇಕು ಎಂಬ ಬಗ್ಗೆ ಮಾನ್ಯ ಶ್ರೀ ಯಂಕಟಪ್ಪನವರಿಗೆ ಇರುವಷ್ಟೇ ಕಳಕಳಿ ನನಗೂ ಇದೆ ಎಂಬುದನ್ನು ಒಪ್ಪುತ್ತಾರೆಂದು ನಾನು ಭಾವಿಸುತ್ತೇನೆ. ಆದ್ದರಿಂದ ಇದರ ಬಗ್ಗೆ ಬೇಗ ನಿರ್ಣಯವನ್ನು ತೆಗೆದುಕೊಳ್ಳುತ್ತೇನೆ ಎನ್ನುವುದನ್ನು ಸಭೆಗೆ ತಿಳಿಸುತ್ತಿದ್ದೇನೆ.

ಶ್ರೀ ಜೆ. ಎಚ್. ಪಟೀಲ್.—ಅಧ್ಯಕ್ಷರೇ, ಈ ಪ್ರಶ್ನೆಗೆ ಕೊಟ್ಟಿರುವ ಉತ್ತರ ಎಷ್ಟು ವಿಚಿತ್ರವಾಗಿದೆ ಯೆಂದರೆ (೨) ತುಂಗಾ ಮತ್ತು ಭದ್ರಾ ಆಯಕಟ್ಟಿನಲ್ಲಿ ಬರುವ ಕಂದಾಯ ಇಲಾಖೆಯ ಮತ್ತು ಗೋಮಾಳದ ಜಮೀನುಗಳನ್ನು ವಿತರಣೆ ಮಾಡಬಾರದೆಂದು ಸರ್ಕಾರದ ಆದೇಶವಿದೆಯೇ ಎಂಬ ಪ್ರಶ್ನೆಗೆ ಹೌದು ಎಂದು ಹೇಳಿದ್ದಾರೆ; ಮತ್ತು ಶಿವಮೊಗ್ಗ ಜಿಲ್ಲೆಯ ಸಾಗರ ಮತ್ತು ಹೊಸನಗರ ತಾಲ್ಲೂಕು ಗಳ ಕೆಲವು ಭಾಗಗಳನ್ನು ಬಿಟ್ಟು ಉಳಿದೆಲ್ಲ ಪ್ರದೇಶಗಳು ಈ ಆಜ್ಞೆಯ ವ್ಯಾಪ್ತಿಗೆ ಬರುತ್ತದೆ ಎಂದೂ ಹೇಳಿದ್ದಾರೆ. ಇವರು ಹೇಳಿರುವ ಎರಡು ತಾಲ್ಲೂಕುಗಳಲ್ಲಿ ಗೋಮಾಳ ಜಮೀನುಗಳು ಇಲ್ಲ. ತುಂಗಾ ಮತ್ತು ಭದ್ರಾ ಆಯಕಟ್ಟಿನಲ್ಲಿ ಬರತಕ್ಕ ಗೋಮಾಳ ಜಮೀನಂಗಳೇನಿವೆ ಅವು ಬಹಳ ಬೆಲೆಯುಳ್ಳ ನೀರಾವರಿ ಇರತಕ್ಕ ಜಮೀನು. ಅವುಗಳನ್ನು ಹಂಚದೇಹೋದರೆ ಸರ್ಕಾರದ ಉದ್ದೇಶ ಏನಿದೆ ಅದು ಸಾಧನೆಯಾದಂತಾಗುತ್ತದೆಯೇ ಎಂಬುದನ್ನು ಹೇಳಿ.

ಶ್ರೀ ಬಿ. ಬಸವಲಿಂಗಪ್ಪ—ಸ್ವಾಮಿ, ಆಯಕಟ್ಟು ಎಂದರೆ ಇಂಜಿನಿಯರ್ಸ್ ಅವರ ಅಭಿಪ್ರಾಯದ ಪ್ರಕಾರ ೧೫೦ ಮೈಲಿವರೆಗಿನ ಕಟ್ಟಿ ಮೇಲಿರತಕ್ಕ ಪ್ರದೇಶ ಎಂದು. ಈ ಆಣೆಕಟ್ಟಿಗೆ ಬರತಕ್ಕ ನೀರು ಈ ಪ್ರದೇಶ ಏನು ಕೊಟ್ಟಿದ್ದಾರೆ ಈ ಪ್ರದೇಶದಿಂದ ಬರುತ್ತದೆಯಂತೆ. ಇದನ್ನು ಒಪ್ಪಬೇಕು ಬಿಡಬೇಕು ಎಂಬ ಪ್ರಶ್ನೆ ಬೇರೆ. ತಾಂತ್ರಿಕ ತಜ್ಞರ ಅಭಿಪ್ರಾಯವನ್ನು ನಾವು ಒಪ್ಪಲೇಬೇಕಾಗುತ್ತದೆ. ಅದು ಸರಿಯಲ್ಲ ಎಂಬ ವಾದವೂ ಒಂದುಕಡೆ ಇದೆ. ಅದಕ್ಕೆ ಒಂದು ತಜ್ಞರ ಸಮಿತಿ ನೇಮಿಸಿದ್ದೇವೆ. ಇದರ ವರದಿ ಬಂದ ತಕ್ಷಣ ಶೀಘ್ರವಾಗಿ ತೀರ್ಮಾನ ತೆಗೆದುಕೊಳ್ಳುತ್ತೇವೆ ಎಂದು ಹೇಳುತ್ತೇನೆ.

ಶ್ರೀ ಎಸ್. ಎಂ. ಶೀರ್ನಳ್ಳಿ ಚಂದ್ರಶೇಖರ್—ಸ್ವಾಮಿ, ತಮ್ಮ ಆಜ್ಞೆಯೇನೋ ಈ ರೀತಿ ಇದ್ದರೂ ಕೂಡ ವಾಸ್ತವಿಕ ಪರಿಸ್ಥಿತಿ ಏನಿದೆಯೆಂದರೆ ಶಿವಮೊಗ್ಗ ತಾಲ್ಲೂಕಿನಲ್ಲಿ ಬಹುತೇಕ ಗೋಮಾಳ ಜಮೀನು ಬಗರ್‌ಹುಕುಂ ಸಾಗುವಳಿಯಲ್ಲಿದೆ. ಟಿ.ಟಿ.ಆರ್. ಎಂಬುದು ಹೋಗಿ ಈಗ ಟಿ.ಟಿ.ರಾಕ್ಷಸ ಆಗಿದೆ. ಇದರಿಂದ ರೈತರನ್ನು ವಿಮೋಚನೆ ಮಾಡಬೇಕಾದರೆ ಈ ಕಾನೂನನ್ನು ಸಡಿಲಗೊಳಿಸಬೇಕಾಗುತ್ತದೆ. ಆದ್ದರಿಂದ ಅದಷ್ಟು ಜಾಗ್ರತೆ ಈ ಆಜ್ಞೆಯನ್ನು ವಾಪಸು ತೆಗೆದುಕೊಳ್ಳುತ್ತೀರಾ ಸ್ವಾಮಿ ?

ಶ್ರೀ ಬಿ. ಬಸವಲಿಂಗಪ್ಪ.—ಅಲ್ಲಿ ವಾಪಸ್ ತೆಗೆದುಕೊಳ್ಳುವ ಸಂಭವ ಇಲ್ಲ. ತಜ್ಞರ ಸಮಿತಿ ವರದಿ ಬಂದ ಮೇಲೆ ಈ ಆಜ್ಞೆ ವಾಪಸ್ ತೆಗೆದುಕೊಳ್ಳಬೇಕೇ ಬಿಡಬೇಕೆ ಎಂಬುದನ್ನು ಪರಿಶೀಲಿಸುತ್ತೇವೆ.

Establishment of the University of Health Sciences in the State

22. SRI G. BASAVANNAPPA (Holehonnur).—Will the Minister for Health and Family Welfare be pleased to state—

(*a*) whether there is any proposal before the Government to establish a University of Health Sciences in the State ;

(*b*) if so, at what stage the proposal stands at present ?

SRI B. BASAVALINGAPPA (Minister for Revenue) [On behalf of Sri M. Mallappa (Minister for Health and Family Welfare)].—

(*a*) Yes.

(*b*) The University of Health Sciences Bill was passed by the Legislative Assembly on 8th April 1975. The Bill was taken up for consideration in the Legislative Council on 28th April 1975, but consideration was adjourned, since it was felt necessary to consult the Government of India. The Government of India when consulted did not agree to the proposal of the State Government. The question of setting up of Health Sciences University is therefore allowed to rest for the time being.